ಶೋರಾಪುರ ತಾಲ್ಲೂಕಿನ ಕೆಂಭಾವಿಯಲ್ಲಿ ಪದವಿ ವಿದ್ಯಾಲಯ ಪ್ರಾರಂಭಿಸುವುದು

೧೬೯೦. ಶ್ರೀ ಶಿವಶೇಖರಗೌಡ ಶಿರವಾಳ (ಶಹಾಪುರ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲೆಯ ಶೋರಾಪುರ ತಾಲ್ಲೂಕಿನ ಕೆಂಭಾವಿಯಲ್ಲಿ ಪದವಿ ವಿದ್ಯಾಲಯವನ್ನು ಪ್ರಾರಂಭಿಸುವ ಬಗ್ಗೆ ವಿಶ್ವವಿದ್ಯಾನಿಲಯದವರು ಈಗಾಗಲೇ ಅನುಮತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ವಿದ್ಯಾಲಯವನ್ನು ಪ್ರಾರಂಭಿಸದಿರುವುದಕ್ಕೆ ಕಾರಣವೇನು ?

ಇ) ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) ಮತ್ತು ಇ) ಉದ್ಭವಿಸುವುದಿಲ್ಲ.

ತೋಟಗಾರಿಕೆಯ ಬಗ್ಗೆ

೧೭೧೪. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೭-೮೮ನೇ ಸಾಲಿನಲ್ಲಿ ತುಮಕೂರು ಜಿಲ್ಲಾ ತೋಟಗಾರಿಕಾ ಅಧಿಕಾರಿಗಳು ಕೊಂಡಿರುವ ಬೀಜದ ತೆಂಗಿನಕಾಯಿಗಳು ಎಷ್ಟು ?
(ತೋಟವಾರು ವಿವರ ನೀಡುವುದು)

ಆ) ಜಿಲ್ಲೆಯಲ್ಲಿ ಯಾರ ಯಾರ ತೋಟದಲ್ಲಿ ಖರೀದಿ ಮಾಡಿರುವ ತೆಂಗಿನ ಕಾಯಿಗಳು ಎಷ್ಟು ? ಇದಕ್ಕೆ ಖರ್ಚು ಆದ ಹಣವೆಷ್ಟು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು).—

ಅ) ೧೯೮೭-೮೮ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ ಒಟ್ಟು ೩,೦೩,೧೯೨ ಬೀಜದ ತೆಂಗಿನ ಕಾಯಿಗಳನ್ನು ಶೇಖರಿಸಲಾಗಿದ್ದು, ಇದರಲ್ಲಿ ತುಮಕೂರು ಜಿಲ್ಲಾ ತೋಟಗಾರಿಕಾ ಅಧಿಕಾರಿಗಳು ಕೊಂಡಿರುವ ಬೀಜದ ತೆಂಗಿನ ಕಾಯಿಗಳು ೧,೮೪,೦೭೨ ಆಗಿರುತ್ತದೆ. ಉಳಿದುದನ್ನು ಹಿರಿಯ ಸಹಾಯಕ ತೋಟಗಾರಿಕಾ ಅಧಿಕಾರಿಗಳು, ಹಾಸನ ಇವರು ಕೊಂಡಿರುತ್ತಾರೆ.

ಆ) ತುಮಕೂರು ಜಿಲ್ಲೆಯಲ್ಲಿ ಒಟ್ಟು ೩,೦೩,೧೯೨ ಕಾಯಿಗಳನ್ನು ಶೇಖರಿಸಿದ್ದು, ರೂ. ೧೦,೦೪,೭೯೦ ಖರ್ಚಾಗಿರುತ್ತದೆ. ತೋಟವಾರು ಕೊಂಡ ಕಾಯಿ ಹಾಗೂ ಖರ್ಚು ಮಾಡಿದ ಹಣದ ವಿವರಗಳನ್ನು ಇದಕ್ಕೆ ಲಗತ್ತಿಸಲಾಗಿದೆ.